Date : 18.12.2025

**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**– ಪಾಟೀ ಸವಾಲು – 1 ಮತ್ತು 2 ನೇ ಎದುರುದಾರರ ಪರ ಶ್ರೀ ಜಿ.ಎಸ್.ಎ. ವಕೀಲರಿಂದ –**

ನಾನು ಮಲ್ಲಪ್ಪನಹಳ್ಳಿ ಗ್ರಾಮದ ವಾಸಿ ಇದ್ದು, ನಮ್ಮ ಮಾಲೀಕತ್ವದ ಚಿಕ್ಕಯಗಟಿ ಗ್ರಾಮದ ಸರ್ವೆ ನಂ. 98/3 ಎಪಿ2 ರಲ್ಲಿ 8 ಗುಂಟೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲಾಗಿರುತ್ತದೆ. 1 ನೇ ಎದುರುದಾರರು ನಮ್ಮ ಮಾಲೀಕತ್ವದ ಜಮೀನನ್ನು 2016 ನೇ ಸಾಲಿನಲ್ಲಿ ಭೂಸ್ವಾಧೀನಪಡಿಸಿಕೊಂಡಿದ್ದು, ಆ ವೇಳೆಯಲ್ಲಿ ಆ ಜಮೀನು ಖುಷ್ಕಿ ಜಮೀನು ಇತ್ತು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಹೇಳುವುದೇನೆಂದರೆ, ಆ ವೇಳೆಯಲ್ಲಿ ಆ ಜಮೀನು ಭಾಗಾಯ್ತು ಜಮೀನು ಇತ್ತೆಂದು ಹೇಳುತ್ತಾರೆ. ಅರ್ಜಿಯಲ್ಲಿ ಕಾಣಿಸಿದ ಸ್ವಾಧೀನಪಡಿಸಿಕೊಂಡ ಜಮೀನಿನಲ್ಲಿ 2 ತೆಂಗಿನ ಮರಗಳು ಇದ್ದವೆಂದು ಸೂಚಿಸಲಾಗಿ ಇಲ್ಲಾ, ಅದರಲ್ಲಿ 7 ತೆಂಗಿನ ಮರಗಳು ಇದ್ದವೆಂದು ಸಾಕ್ಷಿ ಹೇಳುತ್ತಾರೆ. ಸದರಿ ಜಮೀನಿನಲ್ಲಿ ನೀವು ಹೇಳುವಂತೆ 7 ತೆಂಗಿನ ಮರಗಳು ಇದ್ದವೆಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆ ಹಾಕಿಲ್ಲವೆಂದರೆ ಸರಿ. ನಿಪಿ-12 ಎಂದು ಗುರುತಿಸಿದ ಅವಾರ್ಡ ನೋಟೀಸನ್ನು 1 ನೇ ಎದುರುದಾರರು ನಿಮಗೆ ನೀಡಿದ್ದು, ಅದರಲ್ಲಿ ನಿಮ್ಮ ಮಾಲೀಕತ್ವದ ಜಮೀನಿನಲ್ಲಿ ಇದ್ದ ಮರಗಿಡಗಳ ಬಗ್ಗೆ ಪರಿಹಾರವೆಂದು ರೂ.23,372/- ಹಣ ಕೊಟ್ಟಿರುವುದು ಕಾಣುವುದು ಎಂದರೆ ಸರಿ. ಸದರಿ ಪರಿಹಾರದ ಹಣವನ್ನು ನಿರ್ಧರಿಸುವಾಗ 1 ನೇ ಎದುರುದಾರರು ತೋಟಗಾರಿಕೆ ಇಲಾಖೆಯವರಿಂದ ವರದಿ ಪಡೆದು, ಅದಕ್ಕೆ ಅನುಗುಣವಾಗಿ ಮೌಲ್ಯ ನಿರ್ಧರಿಸಿ ಆ ಪರಿಹಾರದ ಹಣ ನೀಡಿದ್ದು, ಅದರಿಂದ ಅದು ಸೂಕ್ತ ಇರುವುದು ಎಂದರೆ ಸರಿಯಲ್ಲ.

2) 2016 ನೇ ಸಾಲಿನಲ್ಲಿ ಅರ್ಜಿಯಲ್ಲಿ ಕಾಣಿಸಿದ ನಮ್ಮ ಮಾಲೀಕತ್ವದ ಜಮೀನನ್ನು ಭೂಸ್ವಾಧೀನಪಡಿಸಿಕೊಂಡಿದ್ದು, ಆ ವೇಳೆಯಲ್ಲಿ ಭಾಗಾಯ್ತು ಜಮೀನಿಗೆ ಸಂಬಂಧಿಸಿದಂತೆ ಮೌಲ್ಯ ನಿರ್ಧರಿಸಿ ಪರಿಹಾರ ಕೊಟ್ಟಿರುವರೆಂದು ಸೂಚಿಸಲಾಗಿ, ಇರಬಹುದು, ಆದರೆ ಎದುರುದಾರರು ಕೊಟ್ಟ ಪರಿಹಾರ ಸೂಕ್ತ ಇರುವುದಿಲ್ಲವೆಂದು ಸಾಕ್ಷಿ ಹೇಳುತ್ತಾರೆ. ಅರ್ಜಿಯಲ್ಲಿ ಕಾಣಿಸಿದ ಜಮೀನಿಗೆ ಸಂಬಂಧಿಸಿದಂತೆ ಎದುರುದಾರರು ನಮಗೆ ನೀಡಿದ ಪರಿಹಾರವು ಕಾನೂನು ಬದ್ಧವಾಗಿ ಸೂಕ್ತ ಇರುವುದು ಎಂದರೆ ಸರಿಯಲ್ಲ. ಮುಖ್ಯವಿಚಾರಣೆಯ ಕಂಡಿಕೆ 3 ರಲ್ಲಿ ಕಾಣಿಸಿದ ಅಂಶಗಳಿಗೆ ಸಂಬಂಧಿಸಿದಂತೆ ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆ ಹಾಕಿಲ್ಲವೆಂದರೆ ಸರಿ. ಎಲ್.ಎ.ಸಿ. 19/2019 ಮತ್ತು 24/2019 ರಲ್ಲಿ ಹಾಜರುಪಡಿಸಿದ ನಿಪಿ-5 ಮತ್ತು 14 ಎಂದು ಗುರುತಿಸಿದ ದಾಖಲೆಗಳು ನಮ್ಮ ಗ್ರಾಮದ ಜಮೀನಿಗೆ ಸಂಬಂಧಿಸಿದಂತೆ ಆದ ವಹಿವಾಟಿನ ದಾಖಲೆಗಳು ಇರುವುದಿಲ್ಲವೆಂದು ಸೂಚಿಸಲಾಗಿ, ಸೂಚನೆ ಸರಿಯಲ್ಲ, ನಿಪಿ-5 ಎಂದು ಗುರುತಿಸಿದ ದಾಖಲೆಯು ನಮ್ಮ ಗ್ರಾಮದ ಜಮೀನಿಗೆ ಸಂಬಂಧಿಸಿದ ದಾಖಲೆ ಇರುವುದೆಂದು ಸಾಕ್ಷಿ ಹೇಳುತ್ತಾರೆ. ನಿಪಿ-5 ಮತ್ತು 14 ಎಂದು ಗುರುತಿಸಿದ ದಾಖಲೆಗಳು ಈ ಕೇಸಿಗೆ ಯಾವುದೇ ರೀತಿ ಅನ್ವಯವಾಗುವುದಿಲ್ಲ ಎಂದರೆ ಸರಿಯಲ್ಲ.

3) ದಿಃ 04.02.2016 ರ ಹಿಂದಿನ ದಿನಾಂಕದಲ್ಲಿ ನಮ್ಮ ಗ್ರಾಮದ ಜಮೀನುಗಳ ಬಗ್ಗೆ ಆದ ವಹಿವಾಟಿನ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೇನೂ ತೊಂದರೆ ಇರುವುದಿಲ್ಲ. ಅರ್ಜಿಯಲ್ಲಿ ಕಾಣಿಸಿದ ಭೂಸ್ವಾಧೀನ ಪಡಿಸಿಕೊಂಡ ಜಮೀನಿಗೆ ಸಂಬಂಧಿಸಿದಂತೆ ಎದುರುದಾರರು ಆ ವೇಳೆಯಲ್ಲಿ ಇದ್ದ ಆಸ್ತಿಯ ಮೌಲ್ಯದಂತೆ ಪರಿಹಾರದ ಹಣವನ್ನು ನಿರ್ಧರಿಸಿ ಈಗಾಗಲೇ ನನಗೆ ಕಾನೂನು ಬದ್ಧವಾಗಿ ಸೂಕ್ತ ಪರಿಹಾರ ನೀಡಿದ್ದು, ಆ ಕಾರಣ ಅರ್ಜಿಯಲ್ಲಿ ಕೋರಿದಂತೆ ನಾನು ಪರಿಹಾರ ಪಡೆಯಲು ಅರ್ಹನಲ್ಲವೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)

*ಓದಿ ಹೇಳಿ ಕೇಳಿ ಸರಿ ಇದೆ.*

*1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
***ಚಿತ್ರದುರ್ಗ.***